**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.28/2013**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ | ಪ್ರಾಸಾ -8 |
| ತಂದೆಯ ಹೆಸರು | : ಮುದ್ದೇಗೌಡ | ಚಾಸಾ-5 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ06.07.2024 |
| ವಾಸಸ್ಥಳ | : ಇಲವಾಲ, ಮೈಸೂರು. | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಈ ಪ್ರಕರಣದ ಆರೋಪಿ ನನಗೆ ಪರಿಚಯ ಇಲ್ಲ.

ಸಾಕ್ಷಿಯು ದಿ.17.11.2011 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಒಂದು ಫೋಟೋದಲ್ಲಿ ತಾವು ಇರುವುದಾಗಿ ಗುರುತಿಸುತ್ತಾರೆ. ಮಹಜರ್ ನ ಅಸಲು ಪ್ರತಿಯನ್ನು ನಿಪಿ-22, ಸಾಕ್ಷಿಯ ಸಹಿಯನ್ನು ನಿಪಿ-22(ಎ), ಫೋಟೋವನ್ನು ನಿಪಿ-23 ಎಂದು ಗುರುತಿಸಲಾಯಿತು.

2012-13 ರಲ್ಲಿ ನಾನು ಇಲವಾಲದಲ್ಲಿರುವ ಒಂದು ಒಡವೆ ಅಂಗಡಿಗೆ ಹೋಗಿದ್ದಾಗ ಪೋಲಿಸರು ನನ್ನ ಸಹಿ ಪಡೆದು ಫೋಟೋ ತೆಗೆದಿದ್ದಾರೆ. ಒಡವೆಗಳನ್ನು ಅಡಮಾನ ಮಾಡಿದ್ದ ಬಗ್ಗೆ ಮಹಜರ್ ಎಂದು ಸಹಿ ಪಡೆದಿದ್ದಾರೆ. ಅಲ್ಲಿ ನನ್ನೊಂದಿಗೆ ಚಾಸಾ-4, ಅಂಗಡಿಯ ಮಾಲೀಕ ರವರು ಇದ್ದು ಸಹಿ ಮಾಡುವಾಗ ಸ.4.30 ರ ಸಮಯವಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಇಲವಾಲದ ಬಾಲಾಜಿ ಜ್ಯುವೆಲರ್ಸ್ ನಲ್ಲಿ ದಿ.17.11.2021 ರಂದು ನಿಪಿ-22 ಕ್ಕೆ ಸಹಿ ಮಾಡಿದ್ದು ಫೋಟೋ ಅಲ್ಲಿಯೇ ತೆಗೆದಿದ್ದಾರೆ ಎಂದರೆ ಸರಿ. ಆ ಸಮಯಕ್ಕೆ 1 ನೇ ಆರೋಪಿ ನಾಗರಾಜ ಕಳ್ಳತನ ಮಾಡಿರುವ ಎರಡು ಚಿನ್ನದ ಚೈನ್, ಒಂದು ಜೊತೆ ಕುಂಕುಮದ ಬಟ್ಟಲು ಮತ್ತು ಒಂದು ಜೊತೆ ಕಾಲು ಚೈನನ್ನು ಅಂಗಡಿಯಲ್ಲಿ ಮಾರಾಟ ಮಾಡಿರುವ ಬಗ್ಗೆ ಹಾಗೂ ಆ ವಸ್ತುಗಳನ್ನು ನನ್ನ ಸಮಕ್ಷಮ ಪೋಲಿಸರಿಗೆ ಆರೋಪಿಯೇ ತೋರಿಸಿದ್ದರು ಎಂದರೆ ಸರಿ. ಸಾಕ್ಷಿಯು ನಿಪಿ-23 ರಲ್ಲಿ ಕಾಣುವ ವಸ್ತುಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು: ಆರೋಪಿಯು ತಲೆ ಮರೆಸಿಕೊಂಡಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.